ಸೇಡಂ ತಾಲ್ಲೂಕಿನ ಅರಣ್ಯ ಇಲಾಖೆಯಿಂದ ನೆಟ್ಟಿರುವ ಸಸಿಗಳು.

1489(2275)

ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಟ್ಕಾಲ, ವೆಂಕಟಾಪುರ, ತುಮ್ಮಲಕುಂಟ, ಗಾಡದಾನ, ಮುದೋಳ, ಬೊಂದೆಂಪಲ್ಲಿ ಇನ್ನಿತರ ಸರ್ವೆ ನಂಬರ್‌ಗಳಲ್ಲಿ ಮರಗಳನ್ನು ಇಲಾಖೆಯವರು ಮಾರಾಟ ಮಾಡಿರುವುದರಿಂದ ಬಂದಿರುವ ಹಣವೆಷ್ಟು? (ಗ್ರಾಮವಾರು, ವರ್ಷವಾರು, ವಿವರ ನೀಡುವುದು)

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸದರಿ ಗ್ರಾಮಗಳಲ್ಲಿ ಯಾವುದೇ ಸರ್ವೆ ನಂಬರ್‌ಗಳಲ್ಲಿ ಮರಗಳನ್ನು ಇಲಾಖೆಯವರು ಮಾರಾಟ ಮಾಡಿರುವುದಿಲ್ಲ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಕಾಮಗಾರಿಗಳ ಅಭಿವೃದ್ಧಿ.

1490(2314)

ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದಿಂದ 2001-02ನೇ ಸಾಲಿನಲ್ಲಿ ತೊಡಗಿಸಿರುವ ಒಟ್ಟು ಹಣವೆಷ್ಟು?

ಆ) ಈ ಅಭಿವೃದ್ಧಿಗೆ ನಬಾರ್ಡ್ ಸಂಸ್ಥೆಯ ಮೂಲಕ ಹಣ ಪಡೆಯಲಾಗಿದೆಯೆ: ವಿವರ ನೀಡುವುದು:

ಇ) ಈ ಅಭಿವೃದ್ಧಿ ಕಾಮಗಾರಿಗೆ ಸರ್ಕಾರದ ಕೊಡುಗೆ ಏನು; ವಿವರ ನೀಡುವುದು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ರೂ.525-00 ಲಕ್ಷ.